1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,
ಚಿಕ್ಕಮಗಳೂರು

<u>ಸ್ಪೆಷಲ್ ಮೊಕದ್ದಮೆ ಸಂಖ್ಯೆ: 48/2019</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : ಅಶ್ವಿನಿ ಸಿ.ಹೆಚ್. | ಪಿ.ಡಬ್ಲ್ಯೂ | 01 |
| ಗಂಡನ ಹೆಸರು | : ಶಿವಪ್ಪ | ಸಿ.ಡಬ್ಲ್ಯೂ | 01 |
| ವಯಸ್ಸು | : 35 ವರ್ಷ | | |
| ಉದ್ಯೋಗ | : ಗೃಹಿಣಿ | | |
| ವಾಸಸ್ಥಳ | : ಕಲ್ಲುಮರಿ, ಹಿಂದುಪುರ, ಆಂಧ್ರಪ್ರದೇಶ | | |

ದಿ: 05-09-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:-</u>

1. ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ಗೊತ್ತು, ಆತನನ್ನು ಪೋಲೀಸ್ ಠಾಣೆಯಲ್ಲಿ ನೋಡಿರುತ್ತೇನೆ. ವಿಸಿ ಮೂಲಕ ಹಾಜರಿರುವ 2 ನೇ ಆರೋಪಿ ನನ್ನ ತಾಯಿ. ಮೃತ ಹನುಮಂತಪ್ಪ ನನ್ನ ತಂದೆ. ಚಾಸಾ.12 ಮತ್ತು 13 ನನ್ನ ತಂಗಿ ಹಾಗೂ ತಮ್ಮ. ಚಾಸಾ.2 ರಿಂದ 11 ರವರು ನನ್ನ ತವರು ಮನೆಯ ಅಕ್ಕಪಕ್ಕದ ಮನೆಯವರು.
2. ನಮ್ಮ ತಂದೆ ತಾಯಿಗೆ ಒಟ್ಟು ಮೂರು ಜನ ಮಕ್ಕಳಿದ್ದು, ನಾನು, ಚಾಸಾ.12 ಮತ್ತು 13 ರವರು. ನಮ್ಮ ತಂದೆ ಪೇಂಟಿಂಗ್ ಕೆಲಸ ಮಾಡುತ್ತಿದ್ದರು. ನನ್ನ ತಾಯಿ ಮುನಿಸಿಪಾಲಿಟಿಯ ಕಸದ ಗಂಟೆ ಗಾಡಿಯಲ್ಲಿ ಕೆಲಸ ಮಾಡುತ್ತಿದ್ದರು.
3. ನನ್ನ ತಂದೆ ದಿ: 14.03.2018 ರಂದು ತೀರಿ ಹೋಗಿರುತ್ತಾರೆ. ನನ್ನ ತಂದೆ

ತೀರುವ ಕಾಲಕ್ಕೆ ಶಂಕರಪುರದಲ್ಲಿ ನನ್ನ ತಂದೆ ತಾಯಿ ಹಾಗೂ ತಮ್ಮ ತಂಗಿ ಎಲ್ಲರೂ ಒಟ್ಟಿಗೆ ವಾಸವಿದ್ದೆವು. ನನ್ನ ತಾಯಿ ಹಾಗೂ 1 ನೇ ಆರೋಪಿ ನಡುವೆ ಅನೈತಿಕ ಸಂಬಂಧವಿತ್ತು. ಈ ವಿಚಾರ ನನ್ನ ತಂದೆ, ತಮ್ಮ, ತಂಗಿಗೆ ಗೊತ್ತಿತ್ತು. ನನ್ನ ತಂದೆ ಹಾಗೂ ತಾಯಿ ನಡುವೆ ಇದೇ ವಿಚಾರವಾಗಿ ಯಾವಾಗಲೂ ಜಗಳವಾಗುತ್ತಿತ್ತು. ನನ್ನ ತಂದೆ ತೀರಿ ಹೋದ ಬಗ್ಗೆ ಮೊದಲ ಬಾರಿಗೆ ನನಗೆ 15.03.2018 ರಂದು ಗೊತ್ತಾಯಿತು. ಆ ದಿನ ನಾನು ಮನೆಯಲ್ಲಿದ್ದಾಗ ಸಂಜೆ 7.00 ಗಂಟೆಗೆ ಪೋಲೀಸರು ಮೊಬೈಲಿನಲ್ಲಿ ಒಂದು ಪೋಟೋ ತೋರಿಸಿ ಅಕ್ಕಪಕ್ಕದಲ್ಲಿ ವಿಚಾರಿಸುತ್ತಿದ್ದರು. ನಂತರ ನನ್ನನ್ನು ವಿಚಾರ ಮಾಡಿದಾಗ ನಾನು ಪೋಟೋ ನೋಡಿ ನನ್ನ ತಂದೆ ಎಂದು ಗುರುತಿಸಿದೆ. ಸದರಿ ಪೋಟೋ ನೋಡಿದಾಗ ನನ್ನ ತಂದೆ ತಲೆಗೆ ಪೆಟ್ಟಾಗಿರುವುದು ಕಂಡು ಬಂತು. ಸದರಿ ಪೋಟೋವನ್ನು ಇಂದಾವರದಲ್ಲಿ ತೆಗೆದಿದೆ ಎಂದು ಗೊತ್ತಾಯಿತು. ಶವವರನ್ನು ಚಿಕ್ಕಮಗಳೂರು ಎಂ.ಜಿ. ಆಸ್ಪತ್ರೆಯ ಶವಾಗಾರದಲ್ಲಿ ಇಟ್ಟಿರುವುದಾಗಿ ತಿಳಿಸಿದರು. ಆಗ ನಾನು, ನನ್ನ ತಮ್ಮ, ತಂಗಿ, ದೊಡ್ಡಪ್ಪ ದೊಡ್ಡಮ್ಮ ಎಲ್ಲರೂ ಚಿಕ್ಕಮಗಳೂರು ಎಂ.ಜಿ. ಆಸ್ಪತ್ರೆಗೆ ಹೋದೆವು. ಆ ದಿನ ನನ್ನ ತಾಯಿ ಅಂದರೆ 2 ನೇ ಆರೋಪಿ ಮನೆಯಲ್ಲಿರಲಿಲ್ಲ.

4. ನಾವು ಶವಾಗಾರಕ್ಕೆ ಹೋಗಿ ನನ್ನ ತಂದೆಯ ಶವವನ್ನು ನೋಡಿದಾಗ ಕಣ್ಣು ಬಾಯಿ ಸ್ವಲ್ಪ ತೆರೆದಿತ್ತು, ತಲೆಯ ಹಿಂಬಾಗ ಪೆಟ್ಟು ಬಿದ್ದಿತ್ತು(ಮೂಳೆ ಕಾಣಿಸುತ್ತಿತ್ತು), ಕಿವಿ ಕೆಳಗೆ ಗಾಯವಾಗಿತ್ತು, ಭುಜದಿಂದ ಕೆಳಗೆ ಪರಚಿದಂತ ಗಾಯವಾಗಿತ್ತು, ಮೂಗಿನಲ್ಲಿ ರಕ್ತ ಬಂದ ಒಣಗಿತ್ತು. ಶವದ ಮೇಲೆ ಹಸಿರು

ಬಣ್ಣದ ಶರಟಿನ ಮೇಲೆ ಕಪ್ಪುಬಣ್ಣದ ಗೆರೆ ಇತ್ತು, ನೀಲಿ ಬಣ್ಣದ ಪ್ಯಾಂಟು ಇತ್ತು.

5. ನಂತರ ನಾನು ಗ್ರಾಮಾಂತರ ಪೋಲೀಸ್ ಠಾಣೆಗೆ ಹೋಗಿ ಆರೋಪಿತರ ನಡುವೆ ಅನೈತಿಕ ಸಂಬಂಧ ಇದ್ದಿದ್ದರಿಂದ ನನ್ನ ತಂದೆಯ ಸಾವಿನ ಬಗ್ಗೆ ಅನುಮಾನ ಇದೆ ಎಂದು ದೂರು ನೀಡಿದ್ದೆ. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ನನ್ನ ತಂದೆಯ ಶವವನ್ನು ನೋಡಿದರೆ ಗುರುತಿಸುತ್ತೇನೆ. ಈಗ ನೋಡುತ್ತಿರುವ ಪೋಟೋದಲ್ಲಿ ನನ್ನ ತಂದೆ ಶವ ಕಾಣುತ್ತಿದೆ. ಸದರಿ ಪೋಟೋವನ್ನು ನಿಪಿ.1 ಎಂದು ಗುರುತಿಸಲಾಯಿತು.

6. ನಂತರ ನನ್ನ ತಂದೆ ಪಿ.ಎಂ. ವರದಿ ಬಂದ ಮೇಲೆ 06.09.2018 ರಂದು ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ನಾನು ಠಾಣೆಗೆ ಹೋದಾಗ ಇಬ್ಬರು ಆರೋಪಿತರು ಅಲ್ಲೇ ಇದ್ದರು. ಇಬ್ಬರು ಆರೋಪಿತರು ನನ್ನ ಸಮಕ್ಷಮದಲ್ಲಿ ನನ್ನ ತಂದೆಯನ್ನು ಕೊಲೆ ಮಾಡಿದ್ದೇವೆ ಎಂದು ಪೋಲೀಸರಿಗೆ ಹೇಳಿದರು. ನನ್ನ ತಂದೆಯನ್ನು ಆರೋಪಿತರಿಬ್ಬರು ಸೇರಿ ಆಟೋದಲ್ಲಿ ಇಂದಾವರಕ್ಕೆ ಕರೆದುಕೊಂಡು ಹೋಗಿ, ಯಾವುದೋ ಆಯುಧದಿಂದ ನನ್ನ ತಂದೆಗೆ ಹೊಡೆದು ಕಲ್ಲನ್ನು ಎತ್ತಿಹಾಕಿ ನನ್ನ ತಂದೆಯನ್ನು ಕೊಲೆ ಮಾಡಿರುವುದಾಗಿ ಹೇಳಿದರು. ಅದರಂತೆ ನಾನು ದೂರು ನೀಡಿರುತ್ತೇನೆ. ಸದರಿ ದೂರನ್ನು ನಿಪಿ.2 ಎಂದು, ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಪೋಲೀಸರು ಸಲ್ಲಿಸಿದ ಪ್ರವವ ದಲ್ಲಿ ನನ್ನ ಸಹಿ ಇರುತ್ತದೆ.

7. ನನ್ನ ತಂದೆಯನ್ನು ಕೊನೆಯ ಬಾರಿ ದಿಃ 14.03.2018 ರಂದು ಸಂಜೆ 6.30 ಕ್ಕೆ

ಮನೆಯಿಂದ ಹೋಗಿದ್ದನ್ನು ನಾನು ನೋಡಿದ್ದೆ. ನನ್ನ ತಂದೆ ಆಗಾಗ ಪೇಂಟಿಂಗ್ ಕೆಲಸಕ್ಕೆ ಹೋದಾಗ 2-3 ದಿನ ಅಲ್ಲಿಯೇ ಉಳಿದುಕೊಳ್ಳುತ್ತಿದ್ದರು, ಆ ಕಾರಣದಿಂದ ನನ್ನ ತಂದೆ ಬಗ್ಗೆ ತಕ್ಷಣಕ್ಕೆ ವಿಚಾರ ಮಾಡಲಿಲ್ಲ.

(ಈ ಹಂತದಲ್ಲಿ ಮೂಲಕ ದೂರು ಕಡತದಲ್ಲಿ ಇಲ್ಲದ ಕಾರಣ ಅದನ್ನು ಹಾಜರುಪಡಿಸಲು, ಮಾನ್ಯ ಪ್ರಭಾರ ಪಿಪಿ ರವರ ಕೋರಿಕೆ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ/-
(ಬಿ.ಪುಷ್ಪಾಂಜಲಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಅ.